**ಓ.ಎಸ್. ನಂ. 62/2021** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 3.6.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ</u>

ದಾವಆಸ್ತಿ ಸರ್ವೆ ನಂಬರ್ 41 ಮೂಲತಃ ಕೃಷ್ಣಯ್ಯರವರ ಹೆಸರಿನಲ್ಲಿತ್ತು. ಸದರಿ ಆಸ್ತಿ ಕೃಷ್ಣಯ್ಯ ರವರಿಗೆ ಹೇಗೆ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಕ್ರಯದ ಕರಾರುಪತ್ರ ಆಗುವ ಸಮಯದಲ್ಲಿ ನಾನು ಜಮೀನಿನ ಪಹಣಿ, ಪಾಲು ಪಾರಿಕತ್ತು, ವಂಶವೃಕ್ಷವನ್ನು ನೋಡಿರುತ್ತೇನೆ. ಸದರಿ ಪಾಲುಪಾರಿಕತ್ತನ್ನು ನಾನು ನೋಡಿ ಪ್ರತಿವಾದಿಯರಿಗೆ ವಾಪಸ್ ನೀಡಿರುತ್ತೇನೆ. ದಾವಆಸ್ತಿಯು ಕೃಷ್ಣಯ್ಯ ರವರಿಗೆ ದರಕಾಸ್ತು ಮೂಲಕ ಬಂದಿರುವ ಜಮೀನು ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆ ತೀರಿಕೊಂಡ ನಂತರ ಈವರೆವಿಗೂ ಪ್ರತಿವಾದಿಯರು ದಾವಆಸ್ತಿಯನ್ನು ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿದಾರರು ವಿಭಾಗ ಮಾಡಿಕೊಂಡು ಅವರವರ ಹೆಸರಿಗೆ ಜಂಟಿ ಖಾತೆಯಾಗಿರುತ್ತದೆ ಎನ್ನುವರು. ಪಾಲುಪಾರಿಕತ್ತು ಆಗಿರುವುದು ಸುಳ್ಳು, ಅದನ್ನು ಪ್ರತಿವಾದಿಗಳು ನನಗೆ ತೋರಿಸಿರುವುದಿಲ್ಲ, ಅದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯ ಖಾತೆಯು ಪ್ರತಿವಾದಿ 1 ರಿಂದ 3 ರವರ ಹೆಸರಿಗೆ ಆಗಿರುವ ದಾಖಲೆಯನ್ನು ನಾನು ನೋಡಿರುತ್ತೇನೆ. ಕೃಷ್ಣಯ್ಯ ರವರ 4 ಜನ ಗಂಡು ಮಕ್ಕಳು ವೈಯಕ್ತಿಕವಾಗಿ ಅರ್ಜಿ ಕೊಟ್ಟಿರುವುದರಿಂದ ಅವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿ ಪಾಲುಪಾರಿಕತ್ತು ಮೂಲಕ ಆಗಿರುತ್ತದೆ ಎನ್ನುವರು. 4 ಜನ ಗಂಡು ಮಕ್ಕಳು ಸಾಲ ವಗೈರೆ ಪಡೆದುಕೊಳ್ಳಲು ದಾವಾಆಸ್ತಿಯ ಖಾತೆಯನ್ನು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕೃಷ್ಣಯ್ಯ ರವರ 6 ಜನ ಮಕ್ಕಳ ಪೈಕಿ ಕೃಷ್ಣದಾಸಯ್ಯ ಎಂಬುವವರು ಸಹ ಈಗಲೂ ಬದುಕಿದ್ದು ಅವರ ಹೆಸರಿಗೆ ದಾವಾಆಸ್ತಿಯ ಖಾತೆಯಾಗಿರುವುದಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಯರು 6 ಜನರ ವಂಶವೃಕ್ಷವನ್ನು ಮಾತ್ರ ತೋರಿಸಿರುತ್ತಾರೆ ಎನ್ನುವರು. ಸದರಿ ವಂಶವೃಕ್ಷವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕೃಷ್ಣಯ್ಯ ರವರಿಗೆ ಇನ್ನೊಬ್ಬ ಮಗ ಕೃಷ್ಣಯ್ಯ ಇದ್ದು, ಅವರು ತೀರಿಕೊಂಡಿದ್ದು ಅವರ ಹೆಂಡತಿ ಸಾವಿತ್ರಮ್ಮ ಮತ್ತು ಮಕ್ಕಳಾದ ಜಗದೀಶ, ಗೋಪಾಲ ಮತ್ತು ಗೋವಿಂದ ರವರು ಈಗಲೂ ಸಹ ತುಂಬಸೋಗೆ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಗೆ ಲಕ್ಷ್ಮಿ ಎಂಬ ಮಗಳು ಇರುತ್ತಾಳೆ ಎಂದರೆ ಸಾಕ್ಷಿ ಮಗಳು ಅಪ್ರಾಪ್ತ ವಯಸ್ಕಳಾಗಿದ್ದು, ಕರಾರು ಪತ್ರ ಮಾಡುವ ಸಮಯದಲ್ಲಿ ಅವಳ ಸಹಿ ಬೇಕಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎನ್ನುವರು. ಸದರಿ 2 ನೇ ಪ್ರತಿವಾದಿಯ ಮಗಳ ಹೆಸರು ಲಕ್ಷ್ಮಿ ಎಂದರೆ ನನಗೆ ಹೆಸರು ಗೊತ್ತಿರುವುದಿಲ್ಲ ಎನ್ನುವರು. ದಾವಆಸ್ತಿಯು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದು ನನಗೆ ಗೊತ್ತಿತ್ತು.

ಸರ್ವೆ ನಂಬರ್ 41 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಆಸ್ತಿ ಇದ್ದು, ಸರ್ಕಾರದಿಂದ ದರಕಾಸ್ತು ಮೂಲಕ ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಲುವಾಗಿಲು ಗ್ರಾಮದ ಸರ್ವೆ ನಂಬರ್ 41 ರಲ್ಲಿ ಸುಮಾರು 1000 ಎಕರೆಗಿಂತಲೂ ಜಾಸ್ತಿ ಆಸ್ತಿ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಪತ್ರದಲ್ಲಿ ನಮೂದಿಸಿರುವ ಎರಡು ಚೆಕ್‌ಗಳ ಮೂಲಕ ತಲಾ 1 ಲಕ್ಷ ಹಣ ನನ್ನ ಖಾತೆಯಿಂದ ಡ್ರಾ ಆಗಿರುತ್ತದೆ. ದಿನಾಂಕ 30.11.2019 ರಂದು ಕ್ರಯದ ಕರಾರು ಆಗಿದ್ದು, ಅಂದಾಜು ದಿನಾಂಕ 5 ಅಥವಾ 6-12.2019 ರಂದು ಹಣ ನನ್ನ ಖಾತೆಯಿಂದ ಡ್ರಾ ಆಗಿರುತ್ತದೆ. ಹಣ ಡ್ರಾ ಆಗಿರುವ ಬಗ್ಗೆ ನನ್ನ ಖಾತೆಯಲ್ಲಿ ನಮೂದಾಗಿರುತ್ತದೆ.

ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಪ್ರತಿವಾದಿಯರಿಗೆ 2 ಚೆಕ್ಕುಗಳನ್ನು ನೀಡಿದ ನಂತರ ಅವರು ಬ್ಯಾಂಕಿನಲ್ಲಿ ನಗದೀಕರಣಕ್ಕೆ ಹಾಕಿದಾಗ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ತಿಳಿಸಿದ್ದು, ನಂತರ ನಾನು ಪ್ರತಿವಾದಿಯರಿಂದ 2 ಚೆಕ್ಕುಗಳನ್ನು ಹಣ ಕೊಡುತ್ತೇನೆ ಎಂದು ವಾಪಸ್ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ 2 ಚೆಕ್ಕುಗಳನ್ನು ನಾನೇ ನಿಂತು ಡ್ರಾ ಮಾಡಿಸಿ ಕೊಡಿಸಿರುತ್ತೇನೆ ಎಂದು ದಾವಾಪತ್ರದಲ್ಲಿ ಹೇಳಿರುವುದಿಲ್ಲ. ಪ್ರತಿವಾದಿಯರು ಯಾವುದೇ ಕ್ರಯದ ಕರಾರುಪತ್ರ ಮಾಡಿಕೊಟ್ಟಿರುವುದಿಲ್ಲ, ನಾನು ಪ್ರತಿವಾದಿಯರಿಗೆ 7.5 ಲಕ್ಷ ಹಣವನ್ನು ಮುಂಗಡವಾಗಿ ಕೊಟ್ಟಿರುವುದು ಸುಳ್ಳು ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಕೇರಳದವರು ಮತ್ತು ಸ್ಥಳೀಯರು ಕರಾರು ಪತ್ರ ಮಾಡಿಕೊಂಡು ಬೇರೆಯವರ ಜಮೀನಿನಲ್ಲಿ ಶುಂಠಿ ಬೆಳೆಯುತ್ತಾರೆ ಎಂದರೆ ಸರಿ. ನಾನು 1 ರಿಂದ 3 ನೇ ಪ್ರತಿವಾದಿಯರಿಗೆ ಅವರಿಗೆ ಸಂಬಂಧಪಟ್ಟ ಆಸ್ತಿಯಲ್ಲಿ ಶುಂಠಿ ಬೆಳೆಯುತ್ತೇನೆ ಎಂದು, ಒಂದು ಎಕರೆಗೆ 90 ಸಾವಿರದಂತೆ ಹಣ ಕೊಡುತ್ತೇನೆ ಎಂದು 1 ವರ್ಷದ ಕರಾರನ್ನು ಮಾಡಿಕೊಡಿ ಎಂದು 1 ರಿಂದ 3 ನೇ ಪ್ರತಿವಾದಿಯರನ್ನು ನೋಂದಣಿ ಕಛೇರಿಗೆ ಕರೆದುಕೊಂಡು ಬಂದು ಸುಳ್ಳು ಕ್ರಯದ ಕರಾರನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು ಶುಂಠಿ ಬೆಳೆಯನ್ನು ಮಾಡುವ ಕರಾರನ್ನು ಕೊಡಿ ಎಂದು ಕೇಳಿದಾಗ ನಾನು 1 ರಿಂದ 3 ನೇ ಪ್ರತಿವಾದಿಯರಿಗೆ ನಿಡಿ1 ಮತ್ತು ನಿಡಿ2 ದಾಖಲಾತಿಗಳನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಡಿ1 ರಲ್ಲಿ 25 ಲಕ್ಷ ಎಂದು ನಮೂದಿಸಿ ಸುಳ್ಳು ಕ್ರಯದ ಕರಾರುಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ2 ರಂತೆ 25 ಸಾವಿರಕ್ಕೆ ಬೋಗ್ಯಕ್ಕೆ ತೆಗೆದುಕೊಂಡಿರುತ್ತೇನೆ ಎಂದು ಸುಳ್ಳು ದಾಖಲಾತಿಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಬಡತನವನ್ನು ದುರುಪಯೋಗ ಪಡಿಸಿಕೊಂಡು ನಾನು ಮತ್ತು ನನ್ನ ತಂದೆ ಎಲ್ಲಾ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ3 ಕ್ರಯದ ಕರಾರುಪತ್ರ ಮಾಡುವ ಸಮಯದಲ್ಲಿ ಆಸ್ತಿ ಮೌಲ್ಯ ಎಷ್ಟು ಇತ್ತು ಎಂದು ದಾಖಲಾತಿಯನ್ನು ಪತ್ರ ಬರಹಗಾರರು ಪಡೆದುಕೊಂಡಿರುತ್ತಾರೆ. ಸದರಿ ಸಮಯದಲ್ಲಿ ಪ್ರತಿ ಎಕರೆಗೆ 3 ಲಕ್ಷ ರೂಪಾಯಿಯ ಮೌಲ್ಯವಿತ್ತು. ನಿಪಿ3 ರಂತೆ ಕರಾರು ಪತ್ರ ಆಗಿದೆ ಎಂದು ಹೇಳುವ ಸಮಯದಲ್ಲಿ ದಾವಾಆಸ್ತಿ ಮೌಲ್ಯ ಪ್ರತಿ ಎಕರೆಗೆ 30 ಲಕ್ಷ ಇತ್ತು ಎಂದರೆ ಸರಿಯಲ್ಲ.

ಕಾಟನ್ ಮಹದೇವಪ್ಪ ರವರನ್ನು ನಾನು ಹಿಂದೆ ನೋಡಿರುವುದಿಲ್ಲ, ಕರಾರು ಪತ್ರ ಆಗಿರುತ್ತದೆ ಎಂದು ಹೇಳುವ ದಿನದಂದು ನೋಡಿರುತ್ತೇನೆ. ಅವರು ತುಂಬಸೋಗೆ ಗ್ರಾಮದವರಾಗಿರುತ್ತಾರೆ. ಅವರು ಹೆಚ್.ಡಿ.ಕೋಟೆ ಮತ್ತು ತಮಿಳುನಾಡಿನಲ್ಲಿ ಹತ್ತಿ ವ್ಯಾಪಾರ ಮಾಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅವರು ರಾಜಕೀಯದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ತುಂಬಸೋಗೆ ಗ್ರಾಮಕ್ಕೂ ನಮ್ಮ ಗ್ರಾಮಕ್ಕೂ ಹ್ಯಾಂಡಪೋಸ್ಟ್ ಮೂಲಕ ಹೋದರೆ 6 ಕಿ.ಮೀ ಹಾಗೂ ನಮ್ಮ ಜಮೀನಿನಿಂದ ಹೋದರೆ 4 ಕಿ.ಮೀ ದೂರವಾಗುತ್ತದೆ. ಕಾಟನ್ ಮಹದೇವಪ್ಪ ರವರು ನನಗೆ ತುಂಬಾ ಪರಿಚಯಸ್ಥರಾಗಿದ್ದು ಶುಂಠಿ ಬೆಳೆ ಕರಾರುಪತ್ರ ಎಂದು 1 ರಿಂದ 3 ನೇ ಪ್ರತಿವಾದಿಯರನ್ನು ನೋಂದಣಿ ಕಛೇರಿಗೆ ಕರೆದುಕೊಂಡು ಬಂದು ನಿಪಿ3 ರಂತೆ ಸುಳ್ಳು

ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ3 ದಾಖಲೆಗೆ ಮುತ್ತಯ್ಯ ಹಾಗೂ ಮರೀಗೌಡ ರವರು ಸಹಿ ಮಾಡಿರುತ್ತಾರೆ. ಮುತ್ತಯ್ಯ ಮತ್ತು ಮರೀಗೌಡರನ್ನು ನಾನೇ ಕರೆದುಕೊಂಡು ಬಂದು ನಿಪಿ3 ಕ್ಕೆ ಸಹಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ3 ರಲ್ಲಿ ಕರಾರಿನ ಅವಧಿ 11 ತಿಂಗಳು ಎಂದು ಬರೆಯಲಾಗಿರುತ್ತದೆ. ನಿಪಿ3 ರಲ್ಲಿರುವ ಒಕ್ಕಣೆಗಳನ್ನು ನಾನಾಗಲೀ, ಸಾಕ್ಷಿದಾರರಾಗಲೀ ಅಥವಾ ಪತ್ರ ಬರಹಗಾರರಾಗಲೀ ಪ್ರತಿವಾದಿಯರಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 6 ರಿಂದ 14 ನೇ ಪ್ರತಿವಾದಿಗಳು ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ. ಶುಂಠಿ ಬೆಳೆ ಕರಾರು ಮಾಡಿಕೊಳ್ಳಲು ಪ್ರತಿವಾದಿಗಳೆಲ್ಲರೂ ಬೇಕು ಎಂದು ನಾನು ಮತ್ತು ಕಾಟನ್ ಮಹದೇವಪ್ಪ ರವರು ಪ್ರತಿವಾದಿಗಳ ಮೇಲೆ ಒತ್ತಡ ಹೇರಿ ಅವರನ್ನು ಕರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಪಿ3 ರಂತೆ ಕ್ರಯದ ಕರಾರುಪತ್ರವನ್ನು ಬರೆದುಕೊಡದೇ ಇರುವುದರಿಂದ ನಾನು ನನ್ನ ಪಾಲಿನ ಕರ್ತವ್ಯವನ್ನು ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ3 ರಂತೆ ಕರಾರುಪತ್ರವನ್ನು ಪ್ರತಿವಾದಿಯರು ಮಾಡಿಕೊಡದೇ ಇರುವುದರಿಂದ ನಾನು ಪ್ರತಿವಾದಿಯರಿಗೆ ಕ್ರಯಪತ್ರ ಬರೆದುಕೊಡಿ ಎಂದು ಎಂದಿಗೂ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ವಕೀಲರ ಮೂಲಕ ನೀಡಿರುವ ಉತ್ತರವನ್ನು ನಾನು ತಿಳಿದುಕೊಂಡಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ನನ್ನ ವಕೀಲರು ತಿಳಿದುಕೊಂಡಿರುತ್ತಾರೆ ಎನ್ನುವರು. ಕೃಷ್ಣಯ್ಯರವರಿಗೆ ಬೇರೆ ಮಕ್ಕಳು ಇದ್ದುದ್ದರಿಂದ ನಿಪಿ3 ರಂತೆ ಮೋಸದ ಕರಾರು ಪತ್ರವನ್ನು ಬರೆಸಿಕೊಳ್ಳಲು ನನಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯರು 1991 ರಿಂದ ಪರಿಚಯಸ್ಥರಾಗಿರುತ್ತಾರೆ. ನನಗೆ ಈ ದಾವೆ ಸಲ್ಲಿಸಲು ಯಾವುದೇ ಕಾರಣ ಉದ್ಭವವಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಬಡವರಾಗಿರುವುದರಿಂದ ಅವರ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಕರಾರು ಪತ್ರವನ್ನು ಸೃಷ್ಟಿ ಮಾಡಿ, ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.